## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ಸಂಖ್ಯೆ: 1187/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗೌರಿಶ್ ಎಸ್ | ಪಿಡಬ್ಲ್ಯೂ-12 |
| ತಂದೆಯ/ಗಂಡನ ಹೆಸರು | - | ಶ್ರೀರಂಗಪ್ಪ | ಪಿಡಬ್ಲ್ಯೂ-7 |
| ವಯಸ್ಸು | - | ಸು. 46 ವರ್ಷ | ಪ್ರ.ವ.ಬೋ |
| | | | ದಿನಾಂಕ:12.08.2024 |
| ಉದ್ಯೋಗ | - | ಸಿ ಹೆಚ್ ಸಿ 1367 ಅಬ್ಬಿನಹೊಳೆ ಠಾಣೆ | |
| ವಾಸ | - | ಹಿರಿಯೂರು | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:-**

ನಾನು 2017 ರಿಂದ 08.08.2024 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ:03.10.2020 ರಂದು 4 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ನಂ.300/2020 ರಂತೆ ಪ್ರಕರಣ ದಾಖಲಿಸಿ ಪ್ರ ವ ವರದಿ ತಯಾರಿಸಿದ್ದೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಪಂಚನಾಮೆ ತಯಾರಿಸಿ ದ್ದೇನೆ. ನಿಪಿ-1 ರ ದೂರಿನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-1(ಸಿ) ಎಂದು, ಪ್ರ ವ ವರದಿಯನ್ನು ನಿಪಿ-15 ಎಂದು ಸಹಿಯನ್ನುನಿಪಿ-15(ಎ) ಎಂದು ಗುರುತಿಸಲಾಯಿತು. ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ತಯಾರಿಸಿ ಕಚ್ಚಾ ನಕಾಕಶೆ ತಯಾರಿಸಿದ್ದೇನೆ. ಒಂದು ಫೋಟೋ ತೆಗೆಸಿದ್ದೇನೆ. ಎಪಿ-39 ಬಿ 4826 ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದೇನೆ. ಪಂಚನಾಮೆ ಮತ್ತು ಕಚ್ಚಾ ನಕ್ಷೆಯಲ್ಲಿ ಸಹಿ ನೋಡಿ ಗುರುತಿಸಿದ್ದರಿಂದ

ಸಹಿಗಳನ್ನು ನಿಪಿ-3(ಡಿ) ಮತ್ತು 4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಫೋಟೋ ನೋಡಿ ಗುರುತಿಸಿದ್ದಾರೆ.

03.10.2021 ರಂದು ಠಾಣೆಗೆ ವಾಪಸ್ಸು ಬಂದು ಚಾಸಾ.2 ರವರ ಹೇಳಿಕೆ ಪಡೆದಿರುತ್ತೇನೆ. ದಿಃ10.10.2021 ರಂದು ಐಎಂವಿ ತಪಾಸಣೆಗಾಗಿ ವಾಹನವನ್ನು ತಾಂತ್ರಿಕ ಪರೀಕ್ಷೆಗಾಗಿ ಚಾಸಾ.10 ರವರಿಗೆ ಮನವಿ ಮಾಡಿಕೊಂಡಿರುತ್ತೇನೆ. ದಿಃ22.10.2022 ರಂದು ಪ್ರಕರಣದ ಆರೋಪಿಯಾದ ಗೋಪಾಲಪ್ಪ ನವರು ಠಾಣೆಗೆ ಹಾಜರಾದ ಮೇರೆಗೆ ಅವರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ . ಸದರಿ ಆರೋಪಿ ನ್ಯಾಯಾಲಯದ ಮುಂದಿರುವ ವ್ಯಕ್ತಿಯಾಗಿದ್ದಾನೆ. ಅದೇ ದಿನ ಚಾಸಾ.1 ರವರ ಮರು ಹೇಳಿಕೆ ಪಡೆದಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.13 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಟಿ ಎಸ್ ವಕೀಲರಿಂದಃ

ದಿನಾಂಕಃ03.10.2020 ರಂದು ನಾನು ಠಾಣಾ ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ಹಾಜರಾಗಿ ಯಾವುದೇ ಲಿಖಿತ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಠಾಣಾ ನಂ.300/2020 ರಂತೆ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಪ್ರ ವ ವರದಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಕಚ್ಚಾ ನಕಾಕಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದೇನೆ. 03.10.2021 ರಂದು ಠಾಣೆಗೆ ವಾಪಸ್ಸು ಬಂದು ಚಾಸಾ.2 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ10.10.2021 ರಂದು ಐಎಂವಿ ತಪಾಸಣೆಗಾಗಿ ವಾಹನವನ್ನು ತಾಂತ್ರಿಕ ಪರೀಕ್ಷೆಗಾಗಿ ಚಾಸಾ.10 ರವರಿಗೆ ಮನವಿ

ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ22.10.2022 ರಂದು ಪ್ರಕರಣದ ಆರೋಪಿಯಾದ ಗೋಪಾಲಪ್ಪ ನವರು ಠಾಣೆಗೆ ಹಾಜರಾಗಿಲ್ಲ ಅವರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಈ ದಿನವೇ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ.1 ರವರ ಮರು ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.13 ರವರಿಗೆ ವಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.